ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

ಕನ್ನಡಿಗರ ಧ್ವನಿ

ಪ್ರದೇಶ ಸಮಾಚಾರ

ದಿನಾಂಕ : 06-06-2018

# ಮಾವು ಮಾರಾಟ ವ್ಯವಸ್ಥೆಯ ಅಣಕ

## ಕೃಷಿ ಬೆಲೆ ಆಯೋಗ ಅಧ್ಯಕ್ಷ ವಿಷಾದ | ಮಾವು ಬೆಲೆ ಕುಸಿತ ಹಿನ್ನೆಲೆ ಸಮಾಲೋಚನಾ ಸಭೆ

■ ವಿಜಯವಾಣಿ ಸುದ್ದಿಜಾಲ ರಾಮನಗರ

ರಾಜ್ಯದಲ್ಲಿ ವರ್ಷಕ್ಕೆ 1820 ಲಕ್ಷ ಟನ್ ಮಾವು ಬೆಳೆಯುತ್ತಿದ್ದರೂ ಎಪಿಎಂಸಿಗಳಿಗೆ ಮಾತ್ರ 80 ಸಾವಿರ ಟನ್‌ನಷ್ಟು ಉತ್ಪನ್ನ ಮಾರಾಟಕ್ಕಾಗಿ ಬರುತ್ತಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಮಾವು ದರ ಕುಸಿತ ಕುರಿತು ಅಧಿಕಾರಿಗಳು ಹಾಗೂ ರೈತ ಮುಖಂಡರೊಡನೆ ನಡೆದ ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು. ಮಾರುಕಟ್ಟೆಯಿಂದ ಹೊರಗಡೆ ಮಾರಾಟವಾಗುತ್ತಿರುವ ಮಾವು ನಮ್ಮ ಮಾರಾಟ ವ್ಯವಸ್ಥೆಯನ್ನು ಅಣಕಿಸುವಂತೆ ಇದೆ. ರೈತರು ರಸ್ತೆಗೆ ಹಣ್ಣು ಸುರಿಯುವಂತಹ ಪರಿಸ್ಥಿತಿ ಎದುರಾಗಿರುವುದು ದುಃಖದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು.

**» ಮಾವು ಸಂಸ್ಕರಣೆ ಕುರಿತು ಪ್ರಸ್ತಾವ ಸಲ್ಲಿಸಲು ಅಧಿಕಾರಿಗಳಿಗೆ ಸಲಹೆ**



ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಮಾವು ಮಾರಾಟ ಸೇರಿ ಸಂಪೂರ್ಣ ವ್ಯವಹಾರ, ಬಿಳಿಚೀಟಿ ದಂಧೆ ಕುರಿತು ತನಿಖೆ ನಡೆಸಿ ತಿಂಗಳ ಒಳಗೆ ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಮಾವು ಸಂಸ್ಕರಣೆ ಸೇರಿ ಈ ಭಾಗದ ರೈತರಿಗೆ ಅನುಕೂಲವಾಗುವಂತೆ 100 ಎಕರೆ ಪ್ರದೇಶದಲ್ಲಿ ಕೃಷಿ ಮತ್ತು ತೋಟಗಾರಿಕೆ ಹಬ್ ಸ್ಥಾಪನೆಗೆ ಪ್ರಸ್ತಾವ ಸಲ್ಲಿಸಬೇಕು. ಹಾಪ್‌ಕಾಮ್ಸ್ ಹಾಗೂ ಎಪಿಎಂಸಿಗಳು ಜಂಟಿಯಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಸುಧಾರಣೆಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು. ತೋಟಗಾರಿಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಪರಮಶಿವಮೂರ್ತಿ ಮಾತನಾಡಿ, ಈ ಬಾರಿ ರಾಮನಗರದಲ್ಲಿ ಮಾವು ಮಾರುಕಟ್ಟೆಗೆ ಬರುವುದು ತಡವಾಯಿತು. ನಿಫಾ ವೈರಸ್ ಭೀತಿ ಹಾಗೂ ಮಳೆಯಿಂದಾಗಿ ಬೆಂಗಳೂರಿನಲ್ಲಿ ಮಾವು ಮಾರಾಟ ಕುಸಿಯಿತು. ನಿರೀಕ್ಷೆಗೂ ಮೀರಿದ ಉತ್ಪನ್ನ ಬಂದಿತು. ಹೀಗಾಗಿ ಮಾವಿನ ಬೆಲೆ ಕುಸಿದಿದೆ ಎಂದರು. ಜಿಪಂ ಸಿಇಒ ಮುಲ್ಲೈ ಮುಹಿಲನ್, ಬೆಂಗಳೂರು ಕೃಷಿ ವಿವಿಯ ಮಾರುಕಟ್ಟೆ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಗ್ರೇಸಿ ಸಿಂಗ್, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಎಸ್.ಎಂ. ದೀಪಜಾ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ದೇವರಾಜು, ಮಾವು ಬೆಳೆಗಾರರ ಸಂಘದ ಅಧ್ಯಕ್ಷ ಸಿದ್ದರಾಜು ಇದ್ದರು.

**ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ:** ರೈತರನ್ನು ವ್ಯವಸ್ಥಿತವಾಗಿ ತುಳಿಯುವ ಹುನ್ನಾರ ನಡೆಯುತ್ತಿದೆ. ಎಪಿಎಂಸಿಗೆ ಬರುವ ರೈತರಿಗೆ ಪ್ರವೇಶ ದ್ವಾರದಲ್ಲಿಯೇ ಉತ್ಪನ್ನದ ತೂಕದ ಚೀಟಿ ನೀಡಬೇಕು. ಹೊರ ಹೋಗುವ ಉತ್ಪನ್ನದ ಲೆಕ್ಕ ಇಡಬೇಕು. ಮಾವು ಮೌಲ್ಯವರ್ಧನೆಗೆ ಸಂಸ್ಕರಣ ಘಟಕಗಳನ್ನು ಸ್ಥಾಪಿಸಬೇಕು. ಬಿಳಿಚೀಟಿ ದಂಧೆಯನ್ನು ಸಂಪೂರ್ಣ ನಿಲ್ಲಿಸಬೇಕು. ಶೇ.90 ಉತ್ಪನ್ನವು ದಲ್ಲಾಳಿಗಳ ಮೂಲಕವೇ ಮಾರಾಟ ಆಗುತ್ತಿದೆ. ಆದರೆ ಅವರು ತೆರಿಗೆ ವಂಚಿಸಿ ಕಂಪನಿಗಳಿಗೆ ಹಣ್ಣು ಸರಬರಾಜು ಮಾಡುತ್ತಿದ್ದಾರೆ. ಕೃಷಿ ಮಾರುಕಟ್ಟೆಯಲ್ಲಿಯೇ ಈ ವ್ಯವಹಾರ ನಡೆದಿದ್ದರೂ ಅಧಿಕಾರಿಗಳು, ಆಡಳಿತ ವರ್ಗ ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರತಿ ಕ್ರೇಟ್‌ಗೆ 4 ಕೆ.ಜಿ. ಉತ್ಪನ್ನ ಕಳೆಯುವ ಜತೆಗೆ ಶೇ. 10ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ಬಹುತೇಕ ರೈತರು ಆರೋಪಿಸಿದರು.

**ದೂರು ಬಂದಿಲ್ಲ ಎಂದ ಅಧಿಕಾರಿ:** ಮಾರುಕಟ್ಟೆಯಲ್ಲಿ ಬಿಳಿಚೀಟಿ ವ್ಯವಹಾರ ನಡೆದ ಬಗ್ಗೆ ಯಾವುದೇ ದೂರು ಬಂದಿಲ್ಲ. ಬಂದರೆ ಕ್ರಮ ಕೈಗೊಳ್ಳುತ್ತೇವೆ ಎಂದು ರಾಮನಗರ ಎಪಿಎಂಸಿ ಅಧ್ಯಕ್ಷ ಪುಟ್ಟರಾಮಯ್ಯ ಹೇಳಿದ್ದು, ಇದಕ್ಕೆ ರೈತ ಸಂಘದ ಮುಖಂಡರಾದ ಲಕ್ಷ್ಮಣಸ್ವಾಮಿ, ಕೆ.ಮಲ್ಲಯ್ಯ, ಪ್ರಗತಿಪರ ರೈತ ಬಿಳಗುಂಬ ವಾಸು ಮತ್ತಿತರರು ಆಕ್ಷೇಪ ವ್ಯಕ್ತಪಡಿಸಿದರು. ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ರೈತರಿಗೆ ಈ ಪರಿಸ್ಥಿತಿ ಬಂದೊದಗಿದೆ ಎಂದು ದೂರಿದರು. ರಾಮನಗರದಲ್ಲಿ ಇನ್ನೂ ಶೇ.15-20 ಮಾವು ತೋಟಗಳಲ್ಲಿಯೇ ಉಳಿದಿದ್ದು, ಅದನ್ನು ಖರೀದಿಸಿ ಶಾಲೆಗಳಲ್ಲಿ ಹಾಲು ಮೊಟ್ಟೆ ಬದಲಿಗೆ ಮಾವಿನ ಹಣ್ಣುಗಳನ್ನು ನೀಡಬೇಕು. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಪೂರೈಕೆ ಮಾಡಬೇಕು ಎಂದು ರೈತರು ಸಲಹೆ ನೀಡಿದರು.



ವಿಜಯವಾಣಿ ಚಿತ್ರಗಳು

ರಾಮನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಮಾವು ದರ ಕುಸಿತ ಕುರಿತು ಅಧಿಕಾರಿಗಳು ಹಾಗೂ ರೈತ ಮುಖಂಡರೊಡನೆ ಮಂಗಳವಾರ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಸಮಾಲೋಚನಾ ಸಭೆ ನಡೆಸಿದರು.

### ಎಪಿಎಂಸಿಗೆ ಪ್ರಕಾಶ್ ಕಮ್ಮರಡಿ ಭೇಟಿ

ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಮಂಗಳವಾರ ಸಂಜೆ ರಾಮನಗರದ ಎಪಿಎಂಸಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳ ಕುರಿತು ಪರಿಶೀಲಿಸಿದರು. ಈ ವೇಳೆ ಮಾರುಕಟ್ಟೆಯಲ್ಲಿ ರೈತರು ಮತ್ತು ದಲ್ಲಾಳಿಗಳು ಪ್ರಕಾಶ್ ಕಮ್ಮರಡಿ ಹಾಗೂ ಅಧಿಕಾರಿಗಳ ಜತೆ ವಾಗ್ವಾದ ನಡೆಸಿದರು ಎನ್ನಲಾಗಿದೆ. ಬೆಳಗ್ಗೆ ನಡೆದ ಸಭೆಗೆ ಕೆಲವರನ್ನಷ್ಟೇ ಆಹ್ವಾನಿಸಲಾಗಿತ್ತು. ಮಾರುಕಟ್ಟೆ ಅವ್ಯವಸ್ಥೆ ಕುರಿತು ಚರ್ಚೆ ನಡೆಸಿಲ್ಲ. ನಮ್ಮ ಅಭಿಪ್ರಾಯ ಕೇಳಿಲ್ಲ ಎಂದು ರೈತ ಮುಖಂಡ ಎಂ.ಡಿ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.



ಕೃಷಿ ಬೆಲೆ ಆಯೋಗದ ರಾಜ್ಯಾಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಮಂಗಳವಾರ ಸಂಜೆ ರಾಮನಗರದ ಎಪಿಎಂಸಿಗೆ ಭೇಟಿ ನೀಡಿದ್ದು, ಈ ವೇಳೆ ರೈತರು ಹಾಗೂ ದಲ್ಲಾಳಿಗಳು ಪ್ರಕಾಶ್ ಅವರ ಸಮ್ಮುಖದಲ್ಲೇ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸುತ್ತಿರುವುದು.

### ಎಪಿಎಂಸಿ ಕಾರ್ಯದರ್ಶಿಗಳ ವಿರುದ್ಧ ಜಿಲ್ಲಾಧಿಕಾರಿ ಗರಂ

ಸಭೆಗೆ ಸರಿಯಾಗಿ ಮಾಹಿತಿ ನೀಡದ ಎಪಿಎಂಸಿ ಕಾರ್ಯದರ್ಶಿಗಳ ವಿರುದ್ಧ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಅಸಮಾಧಾನ ವ್ಯಕ್ತಪಡಿಸಿದರು. ಈ ಋತುವಿನಲ್ಲಿ ರಾಮನಗರ ಮಾರುಕಟ್ಟೆಗೆ 64,127 ಕ್ವಿಂಟಾಲ್ ಹಾಗೂ ಚನ್ನಪಟ್ಟಣಕ್ಕೆ 1.85 ಲಕ್ಷ ಕ್ವಿಂಟಾಲ್ ಮಾವು ಆವಕವಾಗಿದೆ ಎಂದು ಎಪಿಎಂಸಿ ಕಾರ್ಯದರ್ಶಿಗಳು ಮಾಹಿತಿ ನೀಡಿದರು. ಆದರೆ ಬಿಳಿಚೀಟಿ ದಂಧೆ ಹಾಗೂ ಅದರಿಂದ ಎಪಿಎಂಸಿಗಳಿಗೆ ಆಗುತ್ತಿರುವ ಸೆಸ್ ನಷ್ಟದ ಕುರಿತು ಮಾಹಿತಿ ನೀಡಲಿಲ್ಲ. ಇದರಿಂದ ಕುಪಿತಗೊಂಡ ಜಿಲ್ಲಾಧಿಕಾರಿ ಡಾ.ಕೆ.ರಾಜೇಂದ್ರ, ಇಬ್ಬರೂ ಅಧಿಕಾರಿಗಳನ್ನು ಅಮಾನತು ಮಾಡುವುದಾಗಿ ಎಚ್ಚರಿಕೆ ನೀಡಿದರು.

ಹೊಸ ದಿಗಂತ
ಬುಧವಾರ
6 ಜೂನ್ 2018
ಬೆಂಗಳೂರು
website www.hosadigantha.com
editor@hosadigantha.in

## ಕಾರಿಗಳಿಗೆ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಸೂಚನೆ

# ಷ್ಟಕ್ಕೊಳಗಾದ ಮಾವು ರೈತರ ವರದಿ ಸಿದ್ಧಪಡಿಸಿ

ತ ವರದಿ: ರಾಮನಗರ, ಜೂ.5

ವಿಕೋಪದಿಂದ ರೈತರು ಬೆಳೆದ ಮಾವು ಗುಣಮಟ್ಟದ ಇಳುವರಿ ಬಾರದೆ ನಷ್ಟವನ್ನು ಸಿರುವುದರಿಂದ, ಮಾರಾಟವಾಗದೆ ಲ್ಲೇ ಬಿಟ್ಟಿರುವ ಮಾವಿನ ಬೆಳೆಯ ನ್ನು ತಯಾರು ಮಾಡಿ ಸರ್ಕಾರಕ್ಕೆ ತಲುಪಿಸಿ, ಆಗಿರುವ ನಷ್ಟವನ್ನು ಭರಿಸುವ ಪ್ರಯತ್ನ ಎಂದು ಅಧಿಕಾರಿಗಳಿಗೆ ಕರ್ನಾಟಕ ಕೃಷಿ ಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಸೂಚನೆ ನೀಡಿದರು.

ದ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣ ದಿದ್ದ ರೈತರ ಹಾಗೂ ಅಧಿಕಾರಿಗಳ ಸಭೆಯ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಚ್ಚು ಬೆಳೆಯುವ ಬೆಳೆ ಮಾವು ಆಗಿದೆ.ಅದರೆ ಂದು ಮಾವು ಕೆಜಿಗೆ 5 ರೂಗಳಿಗೆ ಕುಸಿತ ಲ್ಲ.ಅದರೆ ಈ ಭಾರಿ ಇಷ್ಟು ಪ್ರಮಾಣದಲ್ಲಿ ವಾಗಲು ಕಾರಣವೇನೆಂದು ಸಭೆಯಲ್ಲಿ ೊಡಗಿದರು.

ಹಾಪ್ ಕಾಮ್ಸ್, ಮಾವು ಮಂಡಳಿ, ರಿಕೆ ಇಲಾಖೆ ಅಧಿಕಾರಿಗಳು ಮಾತನಾಡಿ ರ್ಷಕ್ಕಿಂತ ಈ ವರ್ಷ ಕಳೆದ ಎರಡು ಮೂರು ಳಿಂದ ಆಗುತ್ತಿರುವ ಮಳೆಯಿಂದ ನಿಗದಿತ ಹೆಚ್ಚುವರಿ ತೂಕದ ಇಳುವರಿ ಬಂದಿರುವುದು ಯಾದರೆ, ಮತ್ತೊಂದೆಡೆ ವಿಪರಿತ ಮಳೆಯಿಂದ ಫಸಲಿಗೆ ಆಗಿರುವ ಹಾನಿಯಿಂದ ಹಾಗೂ ವೈರಸ್ ಹರಡಿರುವುದರಿಂದ ಮಾವುನ್ನು ಮಾಡಬಾರದೆಂಬ ಜನರಲ್ಲಿ ಮೂಡಿರುವ ಅಪನಂಬಿಕೆಯಿಂದ ಹಾಗೂ ಬೆಂಗಳೂರಿನಿಲ್ಲಿ ಮಧ್ಯಾಹ್ನ ಮೇಲೆಯೇ ಮಳೆಯಾಗುತ್ತಿರುವುದರಿಂದ ಜನರು ಮಾರುಕಟ್ಟೆಯತ್ತ ಧಾವಿಸಲು ಸಾಧ್ಯವಾಗದೆ ಮಾವು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡದೆ ಇರುವುದರಿಂದ ಬೆಲೆ ಕುಸಿತಗೊಂಡಿದೆ ಎಂದು ತಿಳಿಸಿದರು.

ದಿಗಂತ ಚಿತ್ರ



ರಾಮನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕರೆದಿದ್ದ ರೈತರ ಹಾಗೂ ಅಧಿಕಾರಿಗಳ ಸಭೆಯಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಮಾತನಾಡಿದರು.

**ಸರ್ಕಾರದ ಬೊಕ್ಕಸಕ್ಕೆ ನಷ್ಟ:** ಮಾವಿನ ವ್ಯಾಪಾರಿ ಪ್ರಾಣೇಶ್ ಮಾತನಾಡಿ, ಶೇ.90ರಷ್ಟು ರೈತರು ಮಾವನ್ನು ಎಪಿಎಂಸಿಗೆ ತಂದು ಹಾಕುತ್ತಿದ್ದರೆ. ಆದರೆ ವರ್ತಕರು, ಎಪಿಎಂಸಿ ಅಧಿಕಾರಿಗಳು ಶಾಮೀಲಾಗಿ ಮಾರುಕಟ್ಟೆಗೆ ಬರುತ್ತಿರುವ ಮಾವಿನ ಸುಳ್ಳು ಲೆಕ್ಕವನ್ನು ಕೊಟ್ಟು,ಸರ್ಕಾರಕ್ಕೆಬರಬೇಕಾಗಿರುವಹಣವನ್ನು ತಿಂದು ಹಾಕುತ್ತಿದರೆ. ಮಾರುಕಟ್ಟೆಗೆ ತೆಗೆದುಕೊಂಡು ಬಂದ ಮಾವನ್ನು ಕ್ರೆಟಿಗೆ 4ಕೆ.ಜಿಯಷ್ಟು ತೆಗೆಯುವುದಲ್ಲದೇ, ಬಿಳಿ ಚೀಟಿ ನೀಡುವುದರ ಮೂಲಕ ಶೇ.10 ಕಮೀಷನ್ ಸಹ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ಆದಕ್ಕೆ ಸಭೆಯಲ್ಲಿ ನೆರೆದಿದ್ದ ಸಾಕಷ್ಟು ರೈತರು ಧ್ವನಿಗೂಡಿಸಿ ಎಪಿಎಂಸಿ ಮಾರುಕಟ್ಟೆಯ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಎಪಿಎಂಸಿಯ ಅಧ್ಯಕ್ಷ ಪುಟ್ಟರಾಮಯ್ಯ ಮಾತನಾಡಿ ನಾನು ಅಧ್ಯಕ್ಷರಾದ ಮೇಲೆ ಬಿಳಿ ಚೀಟಿ ಹಾವಳಿ ಕಡಿಮೆಯಾಗಿದೆ. ಬಿಳಿ ಚೀಟಿ ನೀಡುತ್ತಿದರೆ, ಶೇ.10 ಕಮಿಷನ್ ತೆಗೆದುಕೊಳ್ಳುತ್ತಿದರೆ ಎಂದು ಯಾರು ದೂರು ಸಹ ನೀಡಿಲ್ಲ, ಒಂದು ವೇಳೆ ದೂರು ನೀಡಿದೆ ಅದಲ್ಲಿ ಆ ವರ್ತಕರ ಲೈಸನ್ಸ್ ರದ್ದು ಮಾಡುವ ಕೆಲಸ ಮಾಡುತ್ತೇನೆ ಎಂದರು.

**ವರ್ತಕರವಿರುದ್ಧಕ್ರಮಕೈಗೊಳ್ಳದಅಧ್ಯಕ್ಷರು:** ಹಲವು ರೈತರು ಅವರ ಮಾತಿಗೆ ವಿರೋಧ ವ್ಯಕ್ತಪಡಿಸಿ ಸಾಕಷ್ಟು ಭಾರಿ ಈ ವಿಚಾರವಾಗಿ ದೂರು ಸಲ್ಲಿಸಿದ್ದೇವೆ ಇದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ.ಇದರ ಬಗ್ಗೆ ದೂರು ನೀಡಿದ್ದು ವರ್ತಕರಿಗೆ ತಿಳಿದ ತಕ್ಷಣ ಆ ರೈತ ತಂದಿರುವ ಬೆಳೆ ಉತ್ತಮವಾಗಿಲ್ಲ ಎಂದು ಖರೀದಿ ಮಾಡುವುದಿಲ್ಲ, ಆಗ ರೈತರು ನಮ್ಮ ಮೇಲೆ ಮುಗಿಬಿಳುತ್ತಾರೆ ಎಂದು ಎದರಿ ಅಧ್ಯಕ್ಷರು ವರ್ತಕರ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ಮುಂದಾಗದೆ ನಿರ್ಲಕ್ಷ್ಯ ತೋರಿದ್ದಾರೆ ಎಂದು ಆರೋಪಿಸಿದರು.

ಕೊನೆಯಲ್ಲಿ ಅಧಿಕಾರಿಗಳ ಮತ್ತು ರೈತರು ಹೇಳಿದ ಸಮಸ್ಯೆಗಳನ್ನು ಆಲಿಸಿ ತದನಂತರ ಆಯೋಗದ ಅಧ್ಯಕ್ಷರು ಮಾತನಾಡಿ, ರೈತರು ಇಲ್ಲಿಯವರೆಗೂ ಬೆಳದ ಮಾವನ್ನು ಕಿಳದೆ ತೋಟದಲ್ಲೇ ಬಿಟ್ಟಿರುವ ಮಾವಿನ ಫಸಲು ಎಷ್ಟು ಅದರಿಂದ ಆಗುವ ನಷ್ಟು, ಎಷ್ಟು ರೈತರು ನಷ್ಟ ಅನುಭವಿಸಿದರೆ ಎಂಬುದನ್ನು ಪ್ರಕೃತಿಕ ವಿಕೋಪವೆಂದು ಪರಿಗಣಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ವರದಿ ಕಳುಹಿಸಿ ರೈತರಿಗೆ ಆಗಿರುವ ನಷ್ಟವನ್ನು ಭರಿಸುವ ಪ್ರಯತ್ನ ಮಾಡಿ ಎಂದು ಅ ಕಾರಿಗಳಿಗೆ ಸೂಚನೆ ನೀಡಿದರು.

ಆನ್ ಲೈನ್ ಮಾರುಕಟ್ಟೆ ಮಾಡಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವಂತೆ ತಿಳಿಸಿದ ಅವರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ ಸಮಗ್ರ ವರದಿ ತಯಾರು ಮಾಡಿ ಒಂದು ತಿಂಗಳ ಒಳಗೆ ನೀಡುವಂತೆ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗೆ ಸೂಚನೆ ನೀಡಿದರು.

### ಆಗ್ರಿ ಟೆಕ್ ಪಾರ್ಕ್ ನಿರ್ಮಾಣಕ್ಕೆ 10 ಎಕರೆ ಜಾಗ

ಜಿಲ್ಲೆಯಲ್ಲಿ ಆಗ್ರಿ ಟೆಕ್ ಪಾರ್ಕ್ ನಿರ್ಮಾಣ ಮಾಡುವ ಮೂಲಕ ಹೆಚ್ಚುವರಿ ಬೆಳೆದ ಬೆಳೆಯನ್ನು ಶೆಖರಣೆ ಮಾಡುವ ಘಟಕ ಹಾಗೂ ಬೆಳೆದ ಬೆಳೆಯನ್ನು ರೈತರೇ ಮಾರಾಟ ಮಾಡುವ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದ್ದು ಅದಕ್ಕೆ ಬೇಕಾಗಿರುವ ಸುಮಾರು 100 ಎಕರೆ ಜಾಗವನ್ನು ಜಿಲ್ಲಾಡಳಿತ ಗುರುತಿಸಿ ಕೊಟ್ಟಿದೆ ಅದಲ್ಲಿ ಅದನ್ನು ಸರ್ಕಾರ ಮಟ್ಟದಲ್ಲಿ ಚರ್ಚಿಸಿ ಕಾರ್ಯಗತ ಗೊಳಿಸಲು ಪ್ರಯತ್ನಿಸುವುದಾಗಿ ಕಮ್ಮರಡಿ ತಿಳಿಸಿದರು.